ಇಲ್ಲಿಯವರೆಗೂ ಆ ವಿಷಯವನ್ನು ನಾನು ಯಾರ ಬಳಿಯಲ್ಲಿಯೂ ಹೇಳಿಕೊಂಡಿಲ್ಲ. ಬಹುಶಃ ದೊಡ್ಡಪ್ಪ, ಅಮ್ಮ ಮತ್ತು ನನ್ನನ್ನು ಬಿಟ್ಟು ಅಂದು ನಡೆದ ಹೇಯಕೃತ್ಯ ಇನ್ಯಾರಿಗೂ ತಿಳಿದಿರಲಾರದು.

ಮಾರನೆಯ ದಿವಸ ಬೆಳಿಗ್ಗೆ ಎಚ್ಚರವಾದಾಗ ನನ್ನ ತಲೆ ಅಮ್ಮನ ತೊಡೆಯ ಮೇಲಿತ್ತು. ಮೈಯೆಲ್ಲಾ ಸುಟ್ಟು ಹೋಗುತ್ತಿತ್ತು. ನಾನು ಆಗಾಗ ಬೆಚ್ಚಿ ಬೀಳುತ್ತಿದ್ದೆ. ಅಮ್ಮ ನನ್ನನ್ನು ಡಾಕ್ಟರ ಬಳಿ ಕರೆದುಕೊಂಡು ಹೋಗಲಿಲ್ಲ. ಅಲ್ಲಿ ಹೋದರೆ ಡಾಕ್ಟರ ಬಳಿ ರಾತ್ರಿ ನಡೆದ ಘಟನೆಯನ್ನು ಹೇಳಿ ಬಿಡಬಹುದು ಎಂಬ ಆತಂಕ ಅವಳದ್ದಾಗಿರಬಹುದು. ನನ್ನ ಹಣೆಯ ಮೇಲೆ ಒದ್ದೆ ಬಟ್ಟೆಯನ್ನಿರಿಸಿ ಉಪಚಾರ ಮಾಡಿದಳು. 'ಡಾಕ್ಟ್ರು ಹತ್ರ ಕರಕೊಂಡು ಹೋಗಾನ ನಡೀರಿ ಅಮ್ಮಾರೇ..' ಎಂದ ನಮ್ಮ ಮನೆಯ ಕೆಲಸದ ಹೆಂಗಸಿನ ಮಾತಿಗೆ 'ಏನೂ ಆಗಿಲ್ಲ.. ಸ್ವಲ್ಪ ಜ್ವರ.. ಹುಷಾರಾಗುತ್ತೆ..' ಎಂದು ಕುಗ್ಗಿದ ದನಿಯಲ್ಲಿ ನುಡಿದು ತಲೆತಗ್ಗಿಸಿಕೊಂಡಳು. ಅಂದು ಅಮ್ಮನ ನಡವಳಿಕೆ ನಮ್ಮ ಮನೆಯ ಆಳುಕಾಳುಗಳಿಗೆ ವಿಚಿತ್ರವಾಗಿ ಕಂಡಿರಬೇಕು. ಅಂದು ಉಪ್ಪಿಟ್ಟು ಮಾಡಿ ನನಗೆ ದಿನವೆಲ್ಲಾ ಅದನ್ನೇ ತಿನ್ನಿಸಿದ ಅವಳು ಮಾತ್ರ ದಿನವಿಡೀ ಏನೂ ತಿನ್ನದೆ ಹಸಿದುಕೊಂಡಿದ್ದಿದನ್ನು ಕಂಡು ನನಗೆ ಸಂಕಟವಾಯಿತು. ಅಂದು ಬೆಳಗಿನಿಂದ ದೊಡ್ಡಪ್ಪ ಮನೆಯಲ್ಲಿ ಇರಲಿಲ್ಲ. ರಾತ್ರಿಯೂ ಮನೆಗೆ ಬರಲಿಲ್ಲ. ಆದರೂ ಅಮ್ಮ ಮಲಗುವಾಗ ನಮ್ಮ ರೂಮಿನ ಬಾಗಿಲಿಗೆ ಚಿಲಕ ಹಾಕಿ ಮಲಗಿದಳು. ಅದು ನಾವು ಆ ಮನೆಯಲ್ಲಿ ಇರುವ ತನಕ ಪ್ರತಿದಿನದ ಪದ್ಧತಿಯಾಯಿತು.

ಮಾರನೆಯ ದಿನವೂ ನನಗೆ ಜ್ವರ ಬಿಡಲಿಲ್ಲ. ದೊಡ್ಡಪ್ಪನೂ ಮನೆಗೆ ಬರಲಿಲ್ಲ. ಮಧ್ಯಾಹ್ನ ಅಜ್ಜಿ ಫೋನು ಮಾಡಿದ್ದರು. ಅಮ್ಮ ಏನೂ ನಡೆದಿಲ್ಲವಂತೆ ನಾಟಕೀಯವಾಗಿ ಮಾತನಾಡಿ ಮದುವೆಯ ದಿನ ಅಲ್ಲಿಗೆ ಬರುತ್ತೇನೆಂದು ಹೇಳಿ ಫೋನು ಇಟ್ಟಳು. ಅದರ ಮಾರನೆಯ ದಿನವೂ ಯಥಾಸ್ಥಿತಿ. ಅಜ್ಜಿಯ ಫೋನಿಗೆ ಅದೇ ನಾಟಕವಾಡಿ ಫೋನು ಇಟ್ಟಳು. ಮದುವೆಯ ದಿನ ಬೆಳಿಗ್ಗೆಯೇ ಅಜ್ಜಿಯ ಫೋನು. 'ಇವನಿಗೆ ಸ್ವಲ್ಪ ಜ್ವರ.. ಮದುವೆಗೆ ಬರುವುದಿಲ್ಲ.. ನೀವು ಮದುವೆ ಮುಗಿಸಿಕೊಂಡು ಬನ್ನಿ' ಎಂಬ ಅಮ್ಮನ ಉತ್ತರದಿಂದ ಅಜ್ಜಿ ತೀವ್ರ ಗಾಬರಿಯಾಗಿ ಬಸ್ಸು ಹತ್ತಿ ಮಧ್ಯಾಹ್ನದ ವೇಳೆಗೆ ಒಬ್ಬರೇ ಮನೆಗೆ ಬಂದರು. ಬಂದವರೇ ಅಮ್ಮನ ತೊಡೆಯ ಮೇಲೆ ಮಲಗಿದ್ದ ನನ್ನನ್ನು ಎತ್ತಿಕೊಂಡು ಮಡಿಲಲ್ಲಿ ಮಲಗಿಸಿಕೊಂಡು 'ಏನಾಯ್ತಪ್ಪಾ ನನ್ನ ದೇವ್ರೇ... ಏನಾಯ್ತಪ್ಪಾ ನನ್ನ ಸ್ವಾಮೀ.. ಏನಾಯ್ತು ಬಂಗಾರ..' ಎಂದು ಹಣೆಯನ್ನು ಮುಟ್ಟಿ ಮುಟ್ಟಿ ನೋಡಿ ಕಣ್ಣುಗಳಲ್ಲಿ ನೀರು ತುಂಬಿಕೊಂಡರು. ಅಮ್ಮನಿಗೋ ನನ್ನ ಜ್ವರಕ್ಕಿಂತ ಎಲ್ಲಿ ಮೊನ್ನೆ ನಡೆದ ಘಟನೆಯನ್ನು ಅಜ್ಜಿಯ ಬಳಿ ಹೇಳಿ ಬಿಡುತ್ತೀನೋ ಎನ್ನುವ ತೀವ್ರವಾದ ಆತಂಕ. ಅದರಿಂದಾಗಿ ಹಣೆಯಲ್ಲಿ ಬೆವರಿನ ಹನಿಗಳು ಮೂಡಿದ್ದವು. 'ಏನಿಲ್ಲ ಅವ್ವಾ.. ಸ್ವಲ್ಪ ಜ್ವರ ಅಷ್ಟೇ..' ಎಂದು ನನ್ನನ್ನು ಉತ್ತರಿಸಲು ಬಿಡದೆ ಅವಳೇ ನುಡಿದಳು. ಅಮ್ಮನನ್ನೇ ಒಂದು ಕ್ಷಣ ನೋಡಿದ ಅಜ್ಜಿಗೆ ಯಾಕೋ ಏನೋ ಅವಳ ಮುಖದಲ್ಲಿ ನಿತ್ಯದ ಕಳೆ ಇಲ್ಲ ಎಂದು ಕಳವಳವಾಗಿರಬೇಕು. 'ಸರಿ ಡಾಕ್ಟರ ಹತ್ರ ತೋರಿಸಿಕೊಂಡು ಬಂದೋ ಇಲ್ಲವೋ.. ನಡಿ ತಡ ಮಾಡೋದು ಬೇಡ.. ಆಟೋ ಮಾಡಿಕೊಂಡು ಹೋಗಿ ಬರೋಣ ನಡಿಯಮ್ಮಾ..' ಎಂದು ಅವ್ವ ಅಲವತ್ತುಕೊಂಡದ್ದನ್ನು ನೋಡಿ ಅಮ್ಮನಿಗೆ ಇನ್ನಷ್ಟು ಗಾಬರಿಯಾಗಿ 'ಅಂತಾದ್ದೇನೂ ಇಲ್ಲವ್ವಾ.. ಮೈಬಿಸಿ ಇದೆ ಅಷ್ಟೇ.. ಹುಷಾರಾಗ್ತಾನೆ..' ಎಂದು ಕೃತಕ ಮುಗಳ್ನಗೆಯೊಂದಿಗೆ ಗಡಬಡಿಸಿದ ಅಮ್ಮನ ಎಂದೂ ಇಲ್ಲದ ವರ್ತನೆಯಿಂದ ಆಶ್ಚರ್ಯಗೊಂಡ ಅಜ್ಜಿ ಅಮ್ಮನ ಮುಖವನ್ನೇ ಒಂದು ಕ್ಷಣ ದಿಟ್ಟಿಸಿದರು.

ಅಮ್ಮ ತಲೆತಗ್ಗಿಸಿಕೊಂಡಳು. ಅವಳ ಬಾಡಿದ ಮುಖ, ವಿಚಿತ್ರ ವರ್ತನೆಯಿಂದ ಅಜ್ಜಿಗೆ ಏನಾಗಿದೆ ಎಂದು ಊಹಿಸಲು ಸಾಧ್ಯವಾಗಿರಲಿಲ್ಲವಾದರೂ ಏನೋ ಆಗಿದೆ ಎಂಬ ಸಣ್ಣ ಸಂಶಯ ಮೂಡಿರಬಹುದು. ಅವರು ಏನೊಂದೂ ತಿಳಿಯದೆ ಆಲೋಚನಾಮಗ್ನರಾದರು. ಆ ದಿನವೆಲ್ಲಾ ಅಮ್ಮ ಸ್ವಲ್ಪ ಮರೆಯಾದರೂ ನಾನಿಲ್ಲದೇ ಇದ್ದಾಗ ಏನಾದ್ರೂ ಆಯ್ತಾ ಕಂದಾ.. ಎಂದು ನನ್ನನ್ನು ಕೇಳುವುದರೊಳಗಾಗಿ ಅಮ್ಮ ಅಲ್ಲಿ ಪ್ರತ್ಯಕ್ಷವಾಗಿ ಬಿಡುತ್ತಿದ್ದಳು. ನಾನು ಏನೂ ಇಲ್ಲ ಎನ್ನುವಂತೆ ತಲೆ ಅಲ್ಲಾಡಿಸುತ್ತಿದ್ದೆ. ಅಜ್ಜಿ ಮನೆಯಲ್ಲಿದ್ದ ಕೆಲಸದ ಹೆಂಗಸರ ಬಳಿಯಲ್ಲಿಯೂ ಪಿಸುಮಾತಿನಲ್ಲಿ ವಿಚಾರಿಸಿಕೊಳ್ಳತೊಡಗಿದ್ದರು.

ದೊಡ್ಡಪ್ಪ ಮದುವೆಗೆ ಹೋಗಿದ್ದರೋ ಇಲ್ಲವೋ ಗೊತ್ತಿಲ್ಲ. ಅಂದು ರಾತ್ರಿ ಬೇಗನೇ ಅವರು ಮನೆಗೆ ಬಂದರು. ಅವರ ಬುಲೆಟ್ ಮೋಟಾರು ಸೈಕಲ್ಲಿನ ಸದ್ದು ಕೇಳಿದ ತಕ್ಷಣ ಅಜ್ಜಿಯ ತೊಡೆಯ ಮೇಲೆ ಮಲಗಿ ಟೀವಿ ನೋಡುತ್ತಿದ್ದ ನಾನು ಬೆಚ್ಚಿ ಬಿದ್ದು ನನ್ನ ಮುಖವನ್ನು ಅಜ್ಜಿಯ ಮಡಿಲಿನಲ್ಲಿ ಹುದುಗಿಸಿಕೊಂಡೆ. ದೊಡ್ಡಪ್ಪನನ್ನು ನೋಡಲು ನನಗೆ ಭಯವಾಗುತ್ತಿತ್ತು. ನಾನು ಆವತ್ತು ರಾತ್ರಿ ಬ್ಯಾಟರಿಯಿಂದ ಅವರ ಹಣೆಗೆ ಹೊಡೆದಿರುವುದರಿಂದ ಒಬ್ಬನೇ ಸಿಕ್ಕಿದರೆ ನನಗೆ ಚೆನ್ನಾಗಿ ಹೊಡೆದು ಅವರು ನನ್ನನ್ನು ಸಾಯಿಸಬಹುದು ಎಂದು ಮನಸ್ಸಿನಲ್ಲಿ ಅನಿಸಿ ತೀವ್ರ ಹೆದರಿಕೆಯಾಗುತ್ತಿತ್ತು. ಆಮೇಲೆ ಕೂಡ ನಾನು ಮನೆಯಲ್ಲಿ ಎಂದಾದರೂ ಒಂಟಿಯಾಗಿ ದೊಡ್ಡಪ್ಪನ ಕಣ್ಣಿಗೆ ಬಿದ್ದರೆ ರೂಮಿಗೆ ಓಡಿ ಬಿಡುತ್ತಿದ್ದೆ. ಮನೆಯಿಂದ ಹೊರಗೆ ಸಹಾ ದೊಡ್ಡಪ್ಪನಂತಹ ದಾಂಡಿಗರನ್ನು ನೋಡಿದಾಗಲೆಲ್ಲಾ ನನಗೆ ಒಳಗೊಳಗೆ ಭಯವಾಗುತಿತ್ತು.

ದೊಡ್ಡಪ್ಪ ಹಾಲಿನಲ್ಲಿ ನಿಲ್ಲದೇ ಅವರ ರೂಮಿಗೆ ಹೋಗಿರಬೇಕು. ಹಣೆಯಲ್ಲಿ ಮೂಡಿದ್ದ ಬೊಬ್ಬೆ ವಾಸಿಯಾಗಿರಲಿಲ್ಲವೋ ಏನೋ.. ಅಜ್ಜಿ ಏನದು ಎಂದು ಕೇಳಿಬಿಟ್ಟರೆ ಎನ್ನುವ ಆತಂಕವೂ ಅವರಿಗಿದ್ದಿರಬಹುದು. ಮದುವೆಗೆ ಹೋಗಿದ್ದೇನೋ.. ಬಾರೋ ಊಟ ಮಾಡು.. ಎಂದ ಅಜ್ಜಿಯ ಮಾತಿಗೆ ನಂದು ಊಟ ಆಯ್ತು.. ಎಂದು ದೊಡ್ಡಪ್ಪ ಉತ್ತರಿಸಿದ್ದು ನನಗೆ ಕೇಳಿಸಿತು. ಅಮ್ಮನೂ ಕುಳಿತವಳು ಎದ್ದು ಅವ್ವಾ ಮಲಗಿಕೊಳ್ತೀನಿ.. ಯಾಕೋ ಸಣ್ಣಗೆ ತಲೆ ನೋಯ್ತಾ ಇದೆ.. ಊಟ ಬೇಡ.. ಎಂದು ನನ್ನನ್ನು ಎಬ್ಬಿಸಿ ಕರೆದುಕೊಂಡು ರೂಮಿಗೆ ಹೊರಟದ್ದು, ಇವೆಲ್ಲವೂ ಅಜ್ಜಿಯ ಮನಸ್ಸಿನಲ್ಲಿ ಮೂಡಿದ್ದ ನಾನಿಲ್ಲದೇ ಇರುವಾಗ ಮನೆಯಲ್ಲಿ ಏನೋ ನಡೆದಿದೆ ಎಂಬ ಸಂಶಯವನ್ನು ಬಲಗೊಳಿಸಿರಬೇಕು. ಅಂತಹುದರಲ್ಲೂ ಇರವ್ವಾ ತಾಯಿ ಮಗ ಯಾಕೋ ಹೆದರಿಕೊಂಡದೆ.. ಹಂಚಿ ಕಡ್ಡಿ ತರ್ತೀನಿ.. ಎಂದು ಮೂಲೆಯಲ್ಲಿದ್ದ ಹಂಚಿ ಕಡ್ಡಿ ಪೊರಕೆಯಿಂದ ನಾಲ್ಕಾರು ಹಂಚಿ ಕಡ್ಡಿ ತಂದು ಅವುಗಳಿಗೆ ಬೆಂಕಿ ಹಚ್ಚಿ ನನಗೆ ಉದ್ದಕ್ಕೂ ನಿವಾಳಿಸುತ್ತಾ 'ನಾಯಿ ಕಣ್ಣೇ ನರೀ ಕಣ್ಣೇ..' ಎಂದು ಏನೇನೋ ಹೇಳಿ ಅವೆಲ್ಲವೂ ಉರಿದ ಮೇಲೆ ಉಳಿದ ಕಪ್ಪು ಬೂದಿಯನ್ನು ನನ್ನ ಹಣೆಗೆ ತೀಡಿದರು.

ಮರುದಿನದಿಂದ ಮನೆಯ ವಾತಾವರಣ ಬದಲಾಯಿತು. ಅಮ್ಮ ಮತ್ತು ದೊಡ್ಡಪ್ಪ ಒಬ್ಬರನ್ನೊಬ್ಬರು ಮುಖ ಕೊಟ್ಟು ನೋಡುತ್ತಿರಲಿಲ್ಲ. ಮೊದಲಿನಂತೆ ಮಾತನಾಡುತ್ತಿರಲಿಲ್ಲ. ದೊಡ್ಡಪ್ಪ ಎಷ್ಟೇ ತಡವಾಗಿ ಬಂದರೂ ಕಾಯ್ದು ಕುಳಿತು 'ಬನ್ನಿ ಬಾವಾ.. ಊಟ ಮಾಡಿ..' ಎಂದು ಕರೆಯುತ್ತಿದ್ದ ಅಮ್ಮ ಅಜ್ಜಿಗೆ ದಿನಕ್ಕೊಂದು ಸಬೂಬು ಹೇಳಿ ಬೇಗ ಊಟ ಮುಗಿಸಿ ನನ್ನನ್ನು ಕರೆದುಕೊಂಡು ಹೋಗಿ ರೂಮಿನಲ್ಲಿ ಮಲಗತೊಡಗಿದಳು. ಸೂಕ್ಷ್ಮಗ್ರಾಹಿಯಾದ ಅಜ್ಜಿಗೆ ಆಗ ದೊಡ್ಡಪ್ಪ ಮತ್ತು ಅಮ್ಮನ ನಡುವೆ ಏನೋ ನಡೆದಿದೆ ಎಂಬುದು ದೃಢವಾಗಿರಬಹುದು. ಒಬ್ಬ ಹೆಣ್ಣಾಗಿ ಅಜ್ಜಿಯೂ ನಡೆದ ಘಟನೆಯನ್ನು ಊಹಿಸಿರಲೂ ಬಹುದು. ಆದರೂ ತಾನು ಹೆತ್ತ ಮಗ ಅಂತಹ ಹೀನಕೃತ್ಯಕ್ಕೆ ಇಳಿದಾನೆಂದು ಯಾವ ತಾಯಿ ತಾನೇ ಯೋಚಿಸಲು ಸಾಧ್ಯ? ಅಜ್ಜಿಗೆ ತಿಳಿಯಿತೋ ಇಲ್ಲವೋ ಗೊತ್ತಿಲ್ಲ. ಯಾವಾಗಲೂ ಲವಲವಿಕೆಯಿಂದ ಮನೆಯ ವ್ಯವಹಾರಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಅಜ್ಜಿ ಎಲ್ಲದರಲ್ಲೂ ಆಸಕ್ತಿ ಕಳೆದುಕೊಂಡು ಖಿನ್ನರಾಗಿ ಏನನ್ನೋ ಯೋಚಿಸುತ್ತಾ ಹಾಲಿನಲ್ಲಿ ಟೀವಿ ನೋಡಿಕೊಂಡು ಸೋಫಾದ ಮೇಲೆ ಮಲಗಿಕೊಂಡಿರುತ್ತಿದ್ದರು.

ಮುಂದಿನ ದಿನಗಳಲ್ಲಿ ಅಮ್ಮನಿಗೆ ಇನ್ನೊಂದು ಗೀಳು ಶುರುವಾಯಿತು. ನಾನು ಸ್ಕೂಲಿಗೆ ಹೊರಡಲಿ, ಅಥವಾ ಎಲ್ಲಿಗಾದರೂ ಹೊರಡಲಿ, ಕಿವಿಯಲ್ಲಿ ಅದನ್ನು ಯಾರ ಹತ್ತಿರಾನೂ ಹೇಳಬೇಡ ಮಗನೇ.. ಎಂದು

## ಸಮಯದ ಖಾತೆ

ಪ್ರತಿಯೊಬ್ಬರ ಖಾತೆಗೆ ಪ್ರತಿದಿನ
ಇಪ್ಪತ್ತನಾಲ್ಕು ಗಂಟೆ ಸಮಯ ಸಂದಾಯ
ಉಪಯೋಗಿಸಲಿ, ಬಿಡಲಿ
ಆಗುವುದು ಅಂದೇ ವ್ಯಯ!

★ ಸು.ವಿಜಯಲಕ್ಷ್ಮಿ



ಈಶ್ವರ